# ಮಹಾಂತೇಶ ನವಲಕಲ್ ಕಥೆಗಳ ವಸ್ತು-ವೈವಿಧ್ಯತೆಗಳು

**ಡಾ.ಮಹಾಂತೇಶ ಪಾಟೀಲ**

**ಕನ್ನಡ ಅಧ್ಯಯನ ವಿಭಾಗ**

**ದಾವಣಗೆರೆ ವಿಶ್ವವಿದ್ಯಾನಿಲಯ**

**ಶಿವಗಂಗೋತ್ರಿ-೫೭೭೦೦೭**

**ಮೊಬೈಲ್: ೮೭೨೨೭೨೬೮೮೬.**

ಸಾಹಿತ್ಯ ರಚನೆಯ ಅನನ್ಯತೆಗಳಿಗೆ, ವಸ್ತು ಮತ್ತು ವೈವಿಧ್ಯತೆಗಳಿಗೆ ಹಲವು ಕಾರಣಗಳಿರುತ್ತವೆ. ಅವುಗಳಲ್ಲಿ ಸಾಮಾಜಿಕ ರಚನೆ, ಪ್ರಾದೇಶಿಕ ಸ್ವರೂಪ, ಕ್ರಿಯಾತ್ಮಕ(ಧರ್ಮ-ಜಾತಿ-ಲಿಂಗ-ವರ್ಗ) ರಾಜಕಾರಣ, ಭಾಷಿಕ ವೈಶಿಷ್ಟ◌್ಯತೆಗಳು ಮುಖ್ಯವಾದವು. ಮಲೆನಾಡಿನ ಕಥೆಗಳು, ಕರಾವಳಿ ಕಥೆಗಾರ್ತಿಯರು, ಬಿಸಿಲು ನಾಡಿನ ಕಥೆಗಾರರು- ಈ ಪದಬಳಕೆಯನ್ನು ಆಧುನಿಕ ಕನ್ನಡ ಸಣ್ಣ ಕಥೆಗಳ ಅಧ್ಯಯನದಲ್ಲಿ ಗಮನಿಸುತ್ತೇವೆ. ಮನುಷ್ಯರ ಜೀವನಾನುಭವದ ಕಲ್ಪಿತ ವಾಸ್ತವಗಳು ಕಥೆಗಳ ಹೂರಣವಾದರೂ, ಪ್ರಾದೇಶಿಕವಾಗಿ ಕಥೆಗಾರರಲ್ಲಿ ಭಿನ್ನತೆ, ವಿಶಿಷ್ಟತೆಯನ್ನು ಕಾಣುತ್ತೇವೆ. ಅಂತಹ ವೈಶಿಷ್ಟ◌್ಯಗಳು ಬಿಸಿಲು ನಾಡಿನ ಕಥೆಗಾರರಲ್ಲೂ ನೋಡುತ್ತೇವೆ. ಬಿಸಿಲು ನಾಡು ಎನ್ನುವುದನ್ನು ಕಲಬುರ್ಗಿ, ಬೀದರ, ರಾಯಚೂರು, ಬಳ್ಳಾರಿ, ಕೊಪ್ಪಳ, ಯಾದಗಿರಿ, ವಿಜಯನಗರ ಜಿಲ್ಲೆಗಳಿಗೆ ಸೀಮಿತವಾಗಿಸಿಕೊಂಡು- ಈ ಪದವನ್ನು ಇಲ್ಲಿ ಬಳಸಲಾಗಿದೆ. ದೇಶಿ ಬದುಕಿನ ಬೇರುಗಳಲ್ಲಿ ಒಂದಷ್ಟು ಪಸೆಯನ್ನು ಉಳಿಸಿಕೊಂಡ ಕನ್ನಡ ನಾಡಿನ ಕೆಲವು ಭಾಗಗಳಲ್ಲಿ ಕಲ್ಯಾಣ ಕರ್ನಾಟಕ ಕೂಡ ಒಂದಾಗಿದೆ.

ಹೊಸಗನ್ನಡದ ಸಣ್ಣ ಕಥೆಗಳ ಹುಟ್ಟಿಗೆ- ಆಧುನಿಕ ಮುದ್ರಣ ವ್ಯವಸ್ಥೆ, ಪತ್ರಿಕೆಗಳು, ಇಂಗ್ಲಿಷ್ ಶಿಕ್ಷಣ, ಸ್ವಾತಂತ್ರ್ಯ ಚಳುವಳಿ, ಸಾಹಿತ್ಯಿಕ ಪರಿಸರಗಳು ಕಾರಣವಾದವು. ಸಣ್ಣ ಕಥೆಗಳ ಚರಿತ್ರೆಯು ಬಿಸಿಲು ನಾಡಿನಲ್ಲಿ ಆರಂಭವಾಗಿದ್ದು ತಡವಾಗಿಯೇ. ಕವಿರಾಜಮಾರ್ಗ, ವಡ್ಡಾರಾಧನೆ, ಪಂಪಭಾರತದಂತಹ ಕ್ಲಾಸಿಕಲ್ ಕೃತಿಗಳಿಗೆ ತಾಯಿನೆಲವಾದ ಈ ಭಾಗವು, ಆಧುನಿಕ ಸಾಹಿತ್ಯ ರೂಪಗಳು ತಡವಾಗಿ ಅಂಕುರಗೊಂಡವು. ನವೋದಯ, ಪ್ರಗತಿಶೀಲ, ನವ್ಯ ಬರಹಗಾರರೂ ಇಲ್ಲವೆನ್ನುವಷ್ಟು ಈ ಭಾಗದಲ್ಲಿ ಕಡಿಮೆ. ದಲಿತ-ಬಂಡಾಯ ಕಾಲಘಟ್ಟದಲ್ಲಿ ಬಿಸಿಲು ನಾಡಿನಲ್ಲಿ ಬರಹಗಾರರು ನಾಯಿಕೊಡೆಯಂತೆ ಕಾಣಿಸಿಕೊಂಡರು. ಆಧುನಿಕೋತ್ತರ ಕಾಲದ ಕನ್ನಡ ಸಾಹಿತ್ಯದ ೨೦೦೦ ರಿಂದ ಈಚೆಗೆ ಸಾಹಿತ್ಯ ಸತ್ವ, ಸಮೃದ್ಧತೆಯಿಂದ ಬಿಸಿಲು ನಾಡು ಗಮನ ಸೆಳೆಯುವ ಬೆಳವಣಿಗೆಯನ್ನು ಕಂಡಿದೆ. ವಚನ, ಕೀರ್ತನೆ, ತತ್ವಪದಗಳಿಗೆ ನೆಲೆವಿಡಾದ ಬಿಸಿಲು ನಾಡಿನೊಳಗೆ ಹೊಸ ಮಾದರಿಯ ವಸ್ತು ವೈವಿಧ್ಯತೆಗೆ ಬರಹಗಾರರು ತೆರೆದುಕೊಂಡರು. ಅಂತಹ ಬರಹಗಾರರಲ್ಲಿ ಮಹಾಂತೇಶ ನವಲಕಲ್ ಕಥೆ ಮತ್ತು ನಾಟಕ ಸಾಹಿತ್ಯಕ್ಕೆ ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಈವರೆಗೆ ನೀರಿನ ನೆರಳು(೨೦೦೮), ಭಾರತ ಭಾಗ್ಯವಿಧಾತ(೨೦೧೪)- ಎರಡು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಸಣ್ಣ ಕಥೆಗಳನ್ನು ಅಧ್ಯಯನಿಸಿದಾಗ ನಮಗೆ ಈ ಕೆಳಗಿನ ವಸ್ತು-ವಿಷಯಗಳಲ್ಲಿ ವೈವಿಧ್ಯತೆಯನ್ನು ನೋಡುತ್ತೇವೆ.

೧).ಚರಿತ್ರೆ-ಪುರಾಣಗಳ ಹುಳುಕು-ಹೂರಣ: ಅಭಿಜಾತದಿಂದ ಆಧುನಿಕ ಕಾಲದವರೆಗೆ ಲೇಖಕರ ವಸ್ತು ವಿಷಯಗಳನ್ನು ಗಮನಿಸಿದರೆ ಅವೆರಡು ಅಂಶಗಳನ್ನು ಬಳಸಿಕೊಂಡು ಲೇಖನಿ ಮಾಡಿರುವುದು ಕಾಣುತ್ತೇವೆ. ಅದರಲ್ಲಿ ವಿಶೇಷತೆ ಇರುವುದು- ಆ ಮೂಲಕವಾಗಿ ಸಾಂಕೇತಿವಾಗಿ ಏನನ್ನು ಹೇಳಲಾಗುತ್ತದೆ? ಪರಿಣಾಮಕಾರಿಯಾಗಿ ಹೇಗೆ ಹೇಳಲಾಗಿದೆ? ಎನ್ನುವುದು ಮುಖ್ಯವಾಗುತ್ತದೆ. ಭೂತವನ್ನು ವರ್ತಮಾನಗೊಳಿಸುವ ಮತ್ತು ವರ್ತಮಾನದೊಳಗೆ ಭೂತವನ್ನು ನೆನೆಯುವ- ಮಾದರಿಗಳೆರಡನ್ನು ಕಥೆಗಾರರು ಅನುಸರಿಸುತ್ತಾರೆ. ಚರಿತ್ರೆ ಮತ್ತು ಪುರಾಣಗಳು ಭೂತಕಾಲಿನ ಸಂಗತಿಗಳಾದರೂ ಅವುಗಳ ನಡುವೆ ಭಿನ್ನತೆಯಿದೆ. ಈ ವ್ಯತ್ಯಾಸದಲ್ಲಿ ಇತಿಹಾಸವು ವಾಸ್ತವ ನೆಲೆಯನ್ನು, ಪುರಾಣವು ಕಲ್ಪಿತ ವಾಸ್ತವದ ಆಯಾಮವನ್ನು ಅನುಸರಿಕೊಂಡು ರಚನೆಯಾಗಿವೆ. ಚರಿತ್ರೆಯು ವೈಭವೀಕರಣದ ಹಾದಿಯನ್ನು ಹಾಗೂ ಪುರಾಣವು ಆರಾಧನೆಯ ಮಾರ್ಗವನ್ನು ಕಂಡುಕೊAಡಿದ್ದರಿAದ- ಅವುಗಳಿಂದ ಮಾನವ ಸಮಾಜಕ್ಕೆ ಸಾಧ್ಯವಾಗಬಹುದಾದ ಅರಿವು ಮತ್ತು ಒಳಿತುಗಳು- ಕೆಲವೇ ವರ್ಗ, ಜಾತಿ, ಸಮುದಾಯಗಳಿಗೆ ಸೀಮಿತವಾಗಿಬಿಟ್ಟವು. ಅವುಗಳ ಹಿಂದಿರುವ 'ರಾಜಕಾರಣ' ಬಿಂಬಗಳನ್ನು ಒಡೆಯುವ, ಅದರೊಳಗಿನ ಸತ್ಯದ ತಿರುಳನ್ನು ಮನಗಾನಿಸುವ ಪ್ರಯತ್ನವನ್ನು ಎಲ್ಲ ಕಾಲದ ಬರಹಗಾರರು ಮಾಡುತ್ತ ಬಂದಿದ್ದಾರೆ. ಈ ಕ್ರಮವನ್ನು ಮಹಾಂತೇಶ ನವಲಕಲ್ ಕಥೆಗಳಲ್ಲಿ ಸಹ ಕಾಣಬಹುದಾಗಿದೆ.

ಚರಿತ್ರೆ ಘಟನೆ, ಸತ್ಯಾಂಶಗಳ ಮೇಲೆ ಎಳೆಯಲಾದ ಹೊದಿಕೆಯನ್ನು ಸರಿಸಿ, ವಾಸ್ತವವನ್ನು ಮುಂದಿಡುವ ಜವಾಬನ್ನು ನವಲಕಲ್ ಅವರ ಕಥೆಗಳು ಸ್ವೀಕರಿಸಿದಂತಿದೆ. ಅದಕ್ಕೆ 'ನಾನು ಚಂದ್ರಗುಪ್ತನೆಂಬ ಮೌರ್ಯ' ಉತ್ತಮ ನಿದರ್ಶನವಾಗಿದೆ. ಕಥೆ ಆರಂಭದಲ್ಲಿ ಕಡವಪ್ಪುದಲ್ಲಿ (ಶ್ರವಣಬೆಳಗೊಳ) ಇರುವ ಚಂದ್ರಗುಪ್ತನ ಹಿಂದಿನ ನೆನಕೆಗಳು, ಕನಸುಗಳು, ಮನೋಕ್ಲೇಷೆಗಳು, ಕನವರಿಕೆಗಳನ್ನು 'ಫ್ಲ್ಯಾ ಶ್ ಬ್ಯಾಕ್' ತಂತ್ರಗಾರಿಕೆ ಮೂಲಕವಾಗಿ ಚರಿತ್ರೆಯ ಸತ್ಯವನ್ನು ಅನಾವರಣಗೊಳಿಸಲಾಗಿದೆ. 'ಇತಿಹಾಸವು ಉಳ್ಳವರಿಂದ ಕಟ್ಟಲ್ಪಟ್ಟಿದ್ದು. ಆ ಕಟ್ಟಡವನ್ನು ಕೆಡಹಿದಾಗ ಇಲ್ಲದವರ ಸಮಾಧಿಗಳು ಗೋಚರವಾಗುತ್ತವೆ'- ಮಾತು ಕಥೆಯ ಸಂದರ್ಭದಲ್ಲಿ ಸತ್ಯವೆನಿಸುತ್ತದೆ. ಚಂದ್ರಗುಪ್ತನ ತಂದೆ ಮಗಧದ ನಂದರಲ್ಲಿ ದಂಡನಾಯಕನಾಗಿದ್ದನು (ಹೊಲಗೇರಿ ಹುಡುಗನೊಬ್ಬನು ನಂದರ ಸೈನ್ಯದ ದಂಡನಾಯಕನಾಗಿದ್ದ). ನಂದರನ್ನು ಸದೆಬಡಿಯಲು ಚಾಣಕ್ಯ ಹೂಡಿದ ತಂತ್ರದಲ್ಲಿ ನಂದರನ್ನು ಸೋಲಿಸಿತ್ತಾನೆ. ಚಾಣಕ್ಯನ ತಂದೆ ಚಣಕ ನಂದರು ಭ್ರಷ್ಟರು, ದುಷ್ಟರು ಎಂದು ಅಪಪ್ರಚಾರ ಮಾಡುತ್ತಾನೆ. ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಈ ಸಾಮ್ರಾಜ್ಯಗಳ ಏಳು-ಬೀಳಿನ ಕಥೆಯಲ್ಲಿ ಬ್ರಾಹ್ಮಣ್ಯದ ಏಳು, ದಲಿತರ ಬೀಳುವಿಕೆಯಲ್ಲಿನ ರಾಜಕಾರಣವು- ಅವನಿಗೆ ಬದುಕಿನ ಸಂಧ್ಯಾ ಕಾಲದಲ್ಲಿ ಅರ್ಥವಾಗುತ್ತದೆ. ಆ ಏಳು ಬೀಳಿಗಳಲ್ಲಿ ಬೌದ್ಧರ ನಾಶ, ವೈದಿಕ ವ್ಯವಸ್ಥೆಯ ಪುನರ್ ಸ್ಥಾಪನೆಯು ಅಡಗಿಕೊಂಡಿದೆ. ಭದ್ರಬಾಹುವಿಗೆ 'ಚಂಡಾಲರ ಕೇರಿಯಿಂದ ಮಹಾರಾಣಿ ತರುವುದು ಕಷ್ಟ'- ಎಂಬುವುದನ್ನು ಅರಿತುಕೊಂಡು ಯವನರ ಸೆಲ್ಯೂಕಸ್‌ನ ಮಗಳು ಕಾರ್ನಿಯಾಳೊಂದಿಗೆ ಚಂದ್ರಗುಪ್ತನ ಮದುವೆಗೆ ಸಮ್ಮತಿಸುತ್ತಾರೆ. ಗಂಗಾನದಿಯಲ್ಲಿ ತೇಲುವ ಹೆಣಗಳು, ಅವುಗಳನ್ನು ಭಕ್ಷಿಸುವ ಕಾಪಾಲಿಕರನ್ನು ನಿಷೇಧಿಸುವ ರಾಜನ ಕ್ರಮವನ್ನು ಚಾಣಕ್ಯನು ವಿರೋಧ ವ್ಯಕ್ತಪಡಿಸುತ್ತಾನೆ. ಕಾಲಾಂತರದಲ್ಲಿ 'ಚಾಂಡಾಲ ಬಂಧುಗಳ ನರಮೇಧ, ಬೌದ್ಧರ ನರಮೇಧ' ಅಡಗಿರುವ ಸತ್ಯ ಎದುರಾಗುತ್ತಲೇ ಚಂದ್ರಗುಪ್ತನು ಕಳವಳಿಸುತ್ತಾನೆ. ಹೀಗೆ ಚರಿತ್ರೆಯ ಅಧಿಕಾರ, ಸಿಂಹಾಸನಕ್ಕಾಗಿ ನಡೆಯುವ ಸಂಘರ್ಷ, ಕ್ರೌರ್ಯ, ಹಿಂಸೆ. ಧರ್ಮದ ನರಮೇಧಗಳಿಗೆ ಕಾರಣವಾಗಿರುವ 'ಚಾತುವರ್ಣದ ರಾಜಕಾರಣ'ವನ್ನು ಕಥೆಯು ತೆರೆದಿಡುತ್ತದೆ. ಕೆಳವರ್ಗಗಳ ಚರಿತ್ರೆಯ ಕಥನಗಳನ್ನು ಶೋಧಿಸುವ- ಇಲ್ಲಿನ ಕಥನ ಕ್ರಮವು 'ಸಬಾಲ್ಟರ್ನ್ ಬರವಣಿಗೆ'ಯನ್ನು ನೆನಪಿಸುವಂತಿದೆ.

'ಬೀಜದ ಮರೆಯ ವೃಕ್ಷ' ಕಥೆಯಲ್ಲಿ ಬರುವ ರಜಾಕರ ಕಾಲದ ಸಾಮಾಜಿಕ ಸಂಘರ್ಷದ ವಿವರಗಳು, 'ದಂಡಿ' ಕಥೆಯ ಆರಂಭದಲ್ಲಿ ಕಾಣಿಸುವ ಗಾಂಧೀಜಿಯವರ ದಂಡಿ ಉಪ್ಪಿನ ಸತ್ಯಾಗ್ರಹ ಘಟನೆಯ ನಿರೂಪಣೆಗಳು- ಇವು ಚಾರಿತ್ರಿಕವಾದರೂ ಕಥೆಯನ್ನು ವರ್ತಮಾನವನ್ನು ಭೂತದ ನೆನಕೆಯಲ್ಲಿಟ್ಟು ನೋಡುವ ತಂತ್ರವು ಸಾಂದರ್ಭಿಕವಾದುದು. ಮತ್ತು ಕಥೆಯ ಪ್ರಧಾನ ಭೂಮಿಕೆಗೆ ಒಂದು ಉಪಾಂಶವಾಗಿ ಮಾತ್ರ ಬರುವವು. ಅಂತಹ ಕಡೆಗೆ ವರ್ತಮಾನದ ಚರಿತ್ರೆಗೆ, ಭೂತದ ಚರಿತ್ರೆ- ಒಂದ ಸ್ಮೃತಿಸಂಚಯವಾಗಿ ಅಷ್ಟೇ ಕಾಣಿಸುತ್ತದೆ. ಗಾಂಧೀಜಿ ಬ್ರಿಟೀಷ ಇಸ್ಟ್ ಇಂಡಿಯಾ ಕಂಪನಿ ವಿರುದ್ಧ ಮಾಡಿದ ದಂಡಿ ಸತ್ಯಾಗ್ರಹವು ವರ್ತಮಾನದಲ್ಲಿ ಅಯೋಡಿನ್ ಉಪ್ಪಿನ ಕಂಪನಿಗೆ ಪ್ರತಿರೋಧದ ಹೋರಾಟದ ಚಿತ್ರಣವನ್ನು ಕಥೆಯು ನಿರೂಪಿಸುವುದರಿಂದ 'ದಂಡಿ' ಭೂತ ಅರ್ಥವು, ವರ್ತಮಾನಗೊಳ್ಳುವಿಕೆಯನ್ನು ಕಥೆಗಾರ ದಾಖಲಿಸಿದ್ದಾರೆ.

ಪುರಾಣ, ಜನಪದ ಕಥೆಗಳ ಮಿಥ್‌ಗಳನ್ನು ಬಳಸಿಕೊಂಡು ಕಥೆ ಹೆಣೆಯುವ ಕ್ರಮವನ್ನು ನೀರಿನ ನೆರಳು, ಸ್ಥಾವರ, ಆಕ್ರಾಂತ ಮತ್ತು ಶ್ವಾನ ಪರಿಣಯ ಪ್ರಸಂಗ- ರಚನೆಗಳಲ್ಲಿ ಗಮನಿಸುತ್ತೇವೆ. ಅಲ್ಲಿಯು ಸಹ ಮಿಥ್‌ಗಳ ನಿರಚನೆಯನ್ನು ಕಥೆಯು ಮುಖ್ಯ ಕಥಾವಸ್ತುವಿನ ಮುಂದುವರಿಕೆಗಾಗಿ ಬಳಸಲಾಗಿದೆ. 'ನೀರಿನ ನೆರಳು'ದಲ್ಲಿ ಅರ‍್ಯಾ ಹೇಳುವ ಜನಪದ ಕಥೆಯಲ್ಲಿ ಬ್ರಾಹ್ಮಣ ಗಂಡು, ಲಿಂಗಾಯಿತ ಹೆಣ್ಣುಗಳ ಕೂಡಿಕೆಯಿಂದ ಹುಟ್ಟುವ ಮಗುವನ್ನು ಕೊಲೆ ಮಾಡಿಸಲಾಗುತ್ತದೆ. ಜಾತಿಯ ದ್ವೇಷ, ಲೈಂಗಿಕ ಆಕರ್ಷಣೆಗಳ ಒಳಮಾಯಕವನ್ನು- ಸ್ವಾಮಿ ಎನ್ನುವ ಕೃಷಿ ಅಧಿಕಾರಯ ಬದುಕನ್ನು ಜನಪದ ಕಥೆಯ ಮಿಥ್ ಧ್ವನಿಸುತ್ತದೆ. ಜನಪದ ಕಥೆ, ಲೇಖಕರ ಕಥೆ- ಎರಡು ಸೇರಿಕೊಂಡು ನೀರಿನ ನೆರಳಾಗುತ್ತವೆ. ಕಥೆ ಗಮನ ಸೆಳೆಯುವುದು ತಂತ್ರಗಾರಿಕೆಯಿAದ ಹೊರತು ಆಶಯ, ಕಥನದ ವಸ್ತು ವಿಷಯದಿಂದಲ್ಲ. ಸ್ಥಾವರ ಕಥೆಯಲ್ಲಿ ಅಮೃತ ಲಿಂಗೇಶ್ವರ ದೇವಸ್ಥಾನವನ್ನು ಜನಮನದಲ್ಲಿ ಪ್ರತಿಷ್ಠಾಪಿಸಲು ಚರಿತ್ರೆಯನ್ನು ಸೃಷ್ಟಿಸುವ, ಅದಕ್ಕೆ ಪವಾಡ ರಚಿಸುವ, ಪುರಾಣ ಹೆಣೆಯುವ ಹುನ್ನಾರಗಳನ್ನು ಮೇಲ್ಜಾತಿಯವರು ಮಾಡುತ್ತಾರೆ. ಆ ಕಲ್ಪಿತ ಕಥೆಗಳನ್ನು ಮೂರ್ತಿಭಂಜಕ ಕಾಂತಪ್ಪ ಮಾಸ್ತರ ಒಡೆಯುತ್ತಾನೆ. ಸಾಮಾಜಿಕ ಜೀವನದಿಂದ ತಲೆಮರಿಸಿಕೊಂಡು ಗುಪ್ತವಾಗಿ ಬದುಕುತ್ತಾನೆ.

ಆಕ್ರಾಂತ ಕಥೆಯಲ್ಲಿ ಟಿಪ್ಪು ಸುಲ್ತಾನನೆಂಬ ಹುಡುಗ, ಗೌಡರ ಮಗ, ಕುರುಬರ ಹುಡುಗಿ- ಕೋಮುವಾದಿ ಕ್ರೌರ್ಯವನ್ನು ನಿರೂಪಿಸಲು ಪೌರಾಣಿಕ ಕಥೆಯ ಮಿಥ್‌ನ್ನು ಪ್ರಯೋಗಿಸಲಾಗಿದೆ. ಯಯಾತಿ, ಚಿತ್ರಲೇಖಿ, ಶರ್ಮಿಷ್ಠೆ, ದೇವಯಾನಿ- ಪಾತ್ರಗಳ ಲೋಭ ಸಂಸ್ಕೃತಿ, ಸ್ವಾರ್ಥ ಪ್ರಭುತ್ವದ ನೆಲೆಗಳನ್ನು ವರ್ತಮಾನಗೊಳಿಸಲಾಗಿದೆ. ವಾಸ್ತವ, ಮಾಂತ್ರಿಕತೆ, ವಾಸ್ತವ, ಕಲ್ಪನೆ- ಅಂತಹ ವೈರುಧ್ಯಗಳು ಭೂತ ಮತ್ತು ವರ್ತಮಾನವನ್ನು ಮುಖಾಮುಖಿಯಾಗಿಸುತ್ತ- ಮನುಷ್ಯರ ವರ್ತನಾಲೋಕವನ್ನು ಕಥೆಯಲ್ಲಿ ನಿರೂಪಿಸಲಾಗಿದೆ. ಮಹಾಘನ ಕತ್ತಲು-ದಲ್ಲಿ ಆಲದ ಮರದ ಎಲೆಗಳ ಮೇಲೆ ಹಾವಿನ ಚಿತ್ರವನ್ನು ಕಥೆಕಟ್ಟುವ ಹಿಂದಿರುವ ಮಿಥ್ ಅನ್ನು ನಿರೂಪಕರು ಬಯಲು ಮಾಡುತ್ತ. ಅದಕ್ಕೆ ಕಾರಣವಾದ ಸಸ್ಯಶಾಸ್ತ್ರದ ಕೀಟದ ಜೀವನಕ್ರಮವನ್ನು ನಿರೂಪಿಸುತ್ತಾರೆ. ಶ್ವಾನ ಪರಿಣಯ ಪ್ರಸಂಗದಲ್ಲಿ ಶಾಂಭವಿ ವಿಲಿಯಂ ತನಗೆ ಮಕ್ಕಳಾಗದಿರುವುದಕ್ಕೆ ಪೂರ್ವಜನ್ಮದ ಶಾಪದ ಕಥೆ ಕಟ್ಟುತ್ತಾಳೆ. ಬಿಹಾರದ ದುರ್ಗಾಪುರ ಮೋಚಿ ಹುಡುಗನು (ಚಪ್ಪಲಿ ಹೊಲಿಯುವವ), ಪಂಡಿತರ ಮಗಳಾದ ಧನಿಷ್ಠಾಳನ್ನು ಮೋಹಿಸಿ ಮದುವೆಯಾಗುತ್ತಾನೆ. ಆದ್ದರಿಂದ ಅವನಿಗೆ ನರಕ ಪ್ರಾಪ್ತಿಯಾಗುತ್ತದೆ. ಈ ಪೂರ್ವ ಜನ್ಮದ ಕಥೆ ಕಟ್ಟುವ ಪುರೋಹಿತರು- ವಾಸ್ತವಾಗಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಮತ್ತು ಮದುವೆಯ ಸಂಬAಧಗಳನ್ನು ನಿಯಂತ್ರಿಸುವ ಉದ್ದೇಶವು ಇರುವುದನ್ನು ಕಥೆಯು ತಿಳಿಯಪಡಿಸುತ್ತದೆ. ಜನಪದ ಡಿಸ್‌ಕೋರ್ಸ್ಗಳನ್ನು ಕಥೆಗಳ 'ಥೀಮ್' ಕಟ್ಟಲು

ಕಥೆಗಳಲ್ಲಿ ಬಳಸಲಾಗಿದೆ. ಮಹಾಂತೇಶ ನವಲಕಲ್ ಅವರು ಹೀಗೆ ಕಟ್ಟು ಕತೆಗಳ ಮಿಥ್‌ಗಳ ಒಡೆಯುವ ಮೂಲಕ ಸತ್ಯ, ಜೀವಪರತೆ ಮತ್ತು ಮನುಷ್ಯ ಕಾಳಜಿಯನ್ನು ಪರೋಕ್ಷವಾಗಿ ಕಥೆಯ ಆಶಯದಲ್ಲಿ ದಾಖಲಿಸುತ್ತಾರೆ. ಆಳುವ ವರ್ಗಗಳು ತಮಗೆ ಅನುಕೂಲವಾಗುವ ಕಥೆಗಳನ್ನು ಕಟ್ಟುತ್ತದೆ. ಸಾಹಿತ್ಯವು ಆ ಕಟ್ಟುಕತೆಗಳನ್ನು ಪಡೆದು ಪರಿಶೀಲಿಸುತ್ತದೆ.

೧).ಕೃಷಿ ಬಿಕ್ಕಟ್ಟು- ವ್ಯಾಪಾರಿಕರಣ ಜಾಲಗಳು: ೧೬ನೇ ಶತಮಾನದ ಯುರೋಪಿನಲ್ಲಿ ಆರಂಭವಾದ ಕೈಗಾರಿಕೆಗಳು, ೧೮-೧೯ನೇ ಶತಮಾನದ ಹೊತ್ತಿಗೆ ವಿಶ್ವದ ಹಲವೆಡೆಗೆ ವಿಸ್ತಾರಗೊಂಡವು. ೨೦ನೇ ಶತಮಾನದ ಉತ್ತರಾರ್ಧ ಜಾಗತಿಕವಾಗಿ ವ್ಯಾಪಾರ ವಹಿವಾಟಿನ ಭಾಗವಾಗಿ ಉದಾರಿಕರಣ, ಖಾಸಗಿಕರಣ ಮತ್ತು ಜಾಗತಿಕರಣ (ಎಲ್.ಪಿ.ಜಿ) ವ್ಯವಸ್ಥೆಗಳು ಜಾರಿಗೆ ಬಂದವು. ಅದರ ಪರಿಣಾಮ ಮತ್ತು ದುಷ್ಪರಿಣಾಮಗಳ ಅರಿವು ನಮಗೆ ೨೧ನೇ ಶತಮಾನದ ಪೂರ್ವಾರ್ಧದಲ್ಲಿ ಗೋಚರಿಲಾರಂಭಿಸಿದೆ. ಸೇವಾ ಸರಕು, ವಿಜ್ಞಾನ ಉಪಕರಣಗಳಿಗೆ ಸೀಮಿತವಾಗಿದ್ದ ವ್ಯಾಪಾರಿಕರಣದ ಗಾಳಿಯು ಭಾರತದ ಕೃಷಿ ವ್ಯವಸ್ಥೆಯ ಮೇಲೆ ಬಿರುಗಾಳಿಯಂತೆ ಅಪ್ಪಳಿಸಿತು. ಸ್ಥಳೀಯ ಮತ್ತು ಸಂಪ್ರದಾಯಿಕ ವಕ್ಕಲುತನ ಪದ್ದತಿಗಳು ಬದಿಗೆ ಸರಿದು, ಆಧುನಿಕ ತಂತ್ರಜ್ಞಾನ ಆಧಾರಿತ ಕೃಷಿ ವ್ಯವಸ್ಥೆಯು ಮುಂಚೂಣಿಗೆ ಬಂದಿತು. ಅದರಿಂದ ಬೀಜಪದ್ಧತಿ, ಉಳುಮೆ, ಬೆಳೆ ಕಟಾವು, ರಾಸಾಯನಿಕ ಗೊಬ್ಬರ, ಕೀಟನಾಶಕ, ಕೃಷಿ ಉತ್ಪನ್ನಗಳ ಮಾರಾಟ, ಕೃಷಿ ಕಾರ್ಮಿಕರು- ಎಲ್ಲವೂ ಅಮೂಲಾಗ್ರವಾಗಿ ಸ್ವರೂಪದಲ್ಲಿ ಬದಲಾದವು. ವಿದೇಶಿ ಬೀಜ ಮಾರಾಟ ಮತ್ತು ರಸಾಯನಿಕ ಗೊಬ್ಬರ ಕಂಪನಿಗಳ ಮೇಲಾಟ ಹೆಚ್ಚಿದಂತೆ- ರೈತರ ಬದುಕು ಸಾಲ ಶೂಲಗಳ ಸುಳಿಗೆ ಸಿಲುಕಿತು. ವೈಯಕ್ತಿಕವಾಗಿ ಕೃಷಿ ಪದವಿದರರಾದ ಮಹಾಂತೇಶ ನವಲಕಲ್- ಅವರು ಕೃಷಿ ಮತ್ತು ಮಾರುಕಟ್ಟೆಯ ಸಂಘರ್ಷದಲ್ಲಿ ರೈತರು ಬಲಿಯಾಗುತ್ತಿರುವುದನ್ನು ಕಂಡಿದ್ದರು. ಅಂತಹ ಅನುಭವಗಳನ್ನು ಕಥೆಯ ಭಿತ್ತಿಯೊಳಗೆ ತಂದಿದ್ದಾರೆ. ಅವರ ನೀರ ನೆರಳು, ಭಾರತ ಭಾಗ್ಯವಿಧಾತ- ಎರಡೂ ಸಂಕಲನದಲ್ಲೂ ಈ ಬಗೆಯ ಕಥೆಗಳನ್ನು ಕಾಣುತ್ತೇವೆ.

ಪ್ರಧಾನವಾಗಿ ಕೃಷಿಕರ ಬಿಕ್ಕಟ್ಟು ಚಿತ್ರಿಸುವ ಕಥೆಗಳು- 'ನಾಯಿ ಎಂಬ ಮನುಷ್ಯ', 'ಭಾರತ ಭಾಗ್ಯವಿಧಾತ' ಮತ್ತು 'ಬುದ್ಧಗಂಟೆಯ ಸದ್ದು'. ಈ ಕಥೆಗಳಲ್ಲಿನ ನಾಯಕ ಪಾತ್ರಗಳು ಅಂದರೆ ವಿದೇಶಿ ಕಂಪನಿಯಲ್ಲಿ ಕೆಲಸ ಮಾಡುವ ಭಾರತೀಯ ಯುವಕರು. ಅವರು ಕೃಷಿ ಕುಟುಂಬದಿಂದ ಬಂದವರು. ಆದರೆ ಅವರುಗಳೇ ಕೃಷಿಕರ ಸಮಸ್ಯೆ, ಸಂಕಟ, ಸಾಲ, ಶೂಲ, ಸಾವುಗಳಿಗೆ ಕಾರಣರಾಗುತ್ತಾರೆ. ಬಿಟಿ ಬದನೆ, ಹತ್ತಿ ಬೀಜಗಳನ್ನು ಅಧಿಕ ಇಳುವರಿ ಹೆಸರಿನಲ್ಲಿ ಬೀಜ ಮತ್ತ ರಸಗೊಬ್ಬರಗಳನ್ನು ಮಾರಾಟಮಾಡಿ, ತಮಗೆ ಕಂಪನಿ ಕೊಟ್ಟಿದ್ದ 'ಟಾರ್ಗೇಟ್' ರೀಚ್ ಮಾಡುತ್ತಾರೆ. ಕಂಪನಿ ಒದಗಿಸುವ ಬಡ್ತಿ, ವಿದೇಶಿ ಪ್ರವಾಸ, ಪಾರ್ಟಿ, ಹೆಂಡ-ಹೆಂಗಳೆಯರೊಂದಿಗೆ ಮೋಜಿನಲ್ಲಿ ಮೈಮರೆಯುತ್ತಾರೆ. ಕಂಪನಿಗಳ ಹುನ್ನಾರ, ಡೀಲರ್-ಡಿಸ್ಟ್ರಿಬ್ಯುಟರ್-ಸೇಲರ್‌ಗಳ ಲೋಭಕೋರತನದಿಂದ ರೈತರುಗಳು ಬಲಿಪಶುವಾಗುತ್ತಾರೆ. ಅಂತಹ ಅವ್ಯವಸ್ಥೆಯನ್ನು ಕಣ್ಣುತೆರೆದು ನೋಡುತ್ತ ಕುಳಿತ ಇಲ್ಲಿನ ಸರ್ಕಾರಗಳ ವಂಚಕತನವನ್ನು ಕಥೆಗಾರರು ದಾಖಲಿಸುತ್ತಾರೆ. ಆ ಬಗೆಯ ವಿಕೃತಿ ಬಗೆಗೆ ಕಂಪನಿ ಕೆಲಸಗಾರರಿಗೆ ಮರುಕವಿಲ್ಲ. ಅದು ವ್ಯಾಪಾರದ ಭಾಗವೆನಿಸುವ ದುರಂತವಿದೆ. ಭಾರತೀಯ ರೈತರು ವಿದೇಶಿ ಕಂಪನಿಗಳ ಬೀಜ, ಗೊಬ್ಬರ ಮತ್ತು ಕೀಟನಾಶಕಗಳನ್ನು ಅವಲಂಬಿಸುವಲ್ಲಿ- ಕೃಷಿ ವ್ಯವಸ್ಥೆಯು ಗುಲಾಮಗಿರಿಗೆ ಗುರಿಯಾಗುವ, ಕಂಪನಿಗಳನ್ನು ಅವಲಂಬಿಸುವ ಷಡ್ಯಂತ್ರವನ್ನು ಮಹಾಂತೇಶ ನವಲಕಲ್ ಅವರ ಕಥೆಗಳು ತೆರೆದಿಡುತ್ತವೆ. ಈ ನಿರೂಪಣೆಗಳಲ್ಲಿ ಪ್ರತಿರೋಧವು ಅಪ್ರಧಾನವಾಗಿ, ಆ ಬಗೆಗೆ ಮರುಕ, ವ್ಯಂಗ್ಯ, ವಾಚ್ಯಶೈಲಿಯ ವಿವರಣೆಗಳು ಪ್ರಧಾನವಾಗಿವೆ. ಅದಕ್ಕೆ

ನಿದರ್ಶನವಾಗಿ ನಾಯಿ ಎಂಬ ಮನುಷ್ಯ ಕಥೆಯ ಸೂರ್ಯನಾರಾಯಣ, ಭಾರತ ಭಾಗ್ಯವಿಧಾತದಲ್ಲಿನ ರಮೇಶ- ಇಬ್ಬರಿಗೂ ತಾವು ಮಾಡುತ್ತಿರುವುದು ಅನೈತಿಕ, ಆತ್ಮಭ್ರಷ್ಟತೆಯ ಕೆಲಸ ಎಂದೂ ಗೊತ್ತಿದ್ದರೂ, ಅದನ್ನು ಮುಂದುವರೆಸುವ ಅನಿವಾರ್ಯತೆಗಳನ್ನು ಕಂಪನಿಗಳು ಜಾಲವನ್ನು ಸೃಷ್ಟಿಸಿರುತ್ತವೆ. ಆತ್ಮೀಯ ಶತ್ರುಗಳನ್ನು ಸೃಷ್ಟಿಸುವ ಕಂಪನಿಗಳು, ಮನೆಯವರಿಗೆ ಮರಣಘಾತುಕವಾಗುವಂತೆ ಬದುಕಲೆತ್ನಿಸುತ್ತಾರೆ.

ಸಾಂದರ್ಭಿಕವಾಗಿ ಕೃಷಿಕರ ಸಮಸ್ಯೆಗಳನ್ನು ದಾಖಲಿಸುವ ನಿರೂಪಣೆಗಳು 'ನೀರಿನ ನೆರಳು,' 'ಎಲುಬಿನ ವ್ಯಾಪಾರ'- ಕತೆಗಳಲ್ಲಿವೆ. ಕೃಷಿ ಅಧಿಕಾರಿ ಸ್ವಾಮಿವರು ಭೂ ಹೋರಾಟದಲ್ಲಿ ತೊಡಗುವುದು ವಿದೇಶಿ ಕಂಪನಿಗಳಿಗೆ ಲಾಭಮಾಡಿಕೊಡುವ ಹುನ್ನಾರವಿದೆ. ಎಲುಬಿನ ವ್ಯಾಪಾರ ಕಥೆಯ ನಿರೂಪಕ ಶಿವಕುಮಾರ ಕೂಡ ಕೃಷಿ ಪದವೀಧರ. ಆತನ ಓದು, ಪ್ರಾಯೋಗಿಕವಾಗಿ ಕೃಷಿ ಮಾಡುವಲ್ಲಿ ವಿಫಲತೆಯನ್ನು ಹೊಂದುತ್ತದೆ. ಅದಕ್ಕೆ ಕಂಪನಿಯವರ ಹತ್ತಿ ಬೀಜ ವಿತರಣೆಯಲ್ಲಿನ ಮೋಸ ಮತ್ತು ಒಪ್ಪಂದದ ಮೇಲೆ ಬೆಳೆದ ಕುಂಬಳಕಾಯಿಗಳನ್ನು ಕಂಪನಿಯವರು ಖರೀದಿಸದೇ ಕಣ್ಮರೆಯಾಗುವ ವಂಚನೆಯು ಕಾರಣವಾಗುತ್ತದೆ. ಅವನ ತಂದೆ ಊರಿನ ಸಣ್ಣ ರೈತರಿಗೆ ಭೂಮಿಯನ್ನು ಲಾವಣಿಗಾಗಿ ಕೊಡುತ್ತಾನೆ. ಅವರಿಂದ ಸಾಲ ಮತ್ತು ಬಡ್ಡಿ ವಸೂಲಾತಿಯು ಒಂದು ಬಗೆಯಲ್ಲಿ ಕಂಪನಿಯವರ 'ಎಲುಬಿನ ವ್ಯಾಪಾರ'ದಂತೆಯೇ ಅನಿಸುತ್ತದೆ. ಈ ಎರಡೂ ಕಥೆಗಳು ಕೃಷಿಕರ ಸಮಸ್ಯೆಗಳನ್ನು ಪೂರಕವಾಗಿ ಇಲ್ಲವೆ ಸಾಂದರ್ಭಿಕವಾಗಿ ಮಾತ್ರ ದಾಖಲಿಸುವಲ್ಲಿ ಆಸಕ್ತವಾಗಿವೆ.

೩).ಸಮಕಾಲೀನ ಸಮಸ್ಯೆ: ರಾಜಕಾರಣ, ಕೋಮುವಾದ, ಲೈಂಗಿಕ ವ್ಯಾಪಾರ ಚಿತ್ರಣಗಳು: ಬರಹಗಾರ ಸಮಕಾಲೀನ ಸಮಾಜ ಆಗು-ಹೋಗುಗಳಿಗೆ ದನಿಯಾಗುವ, ಅವುಗಳಿಗೆ ಪ್ರತಿಕ್ರಿಯಿಸುವ, ಮುಖಾಮುಖಿಯಾಗುವ ನಿಟ್ಟಿನಲ್ಲಿ ತನ್ನ ಸಾಹಿತ್ಯವನ್ನು ವರ್ತಮಾನಗೊಳಿಸುತ್ತಾನೆ. ಬರಹಗಾರ ಮತ್ತು ಓದುಗರು ವರ್ತಮಾನಿಗರೇ ಆಗಿರುವುದರಿಂದ ಅದು ಅನಿವಾರ್ಯ ಕೂಡ. ಒಳ್ಳೆಯ ಬರಹಗಳು ಎಲ್ಲ ಕಾಲದ ವರ್ತಮಾನಕ್ಕೆ ಎದುರುಗೊಳ್ಳುತ್ತವೆ. ಅದನ್ನೇ 'ಪಠ್ಯದ ಸಾರ್ವತ್ರಿಕ ವರ್ತಮಾನ'ವೆಂದು ವಿಮರ್ಶಕರು ಗುರುತಿಸುತ್ತಾರೆ. ಮಹಾಂತೇಶ ನವಲಕಲ್ ಕಥೆಗಳಲ್ಲಿ ಜಾತಿ ರಾಜಕಾರಣ, ಕೋಮುವಾದ, ಲೈಂಗಿಕ ವ್ಯಾಪಾರ, ಗಂಡು-ಹೆಣ್ಣಿನ ಸಂಘರ್ಷಗಳು- ವರ್ತಮಾನದ ಸಮಸ್ಯೆಗಳಾಗಿ ಕಾಣಿಸಿಕೊಳ್ಳುತ್ತವೆ. ಅವುಗಳು ಆಧುನಿಕೋತ್ತರ ಭಾರತೀಯ ಸಮಾಜದ ಬಿಕ್ಕಟ್ಟುಗಳು ಕೂಡ ಆಗಿರುವುದನ್ನು ಸಮಾಜಶಾಸ್ತ್ರಜ್ಞರು ಗುರುತಿಸಿದ್ದಾರೆ. ಸಮಸ್ಯೆಗಳಿಗೆ ಕಾರಣ ಹೇಳುವುದು, ಪರಿಹಾರ ಹುಡುಕುವುದು- ಕಥೆಗಾರರ ಉದ್ದೇಶವಲ್ಲ. ಆದರೆ ಆ ಮೂಲಕವಾಗಿ ಸಮಾಜದ ವಾಸ್ತವಗಳ ಹಲವು ಮಗ್ಗುಲಗಳನ್ನು ತೆರೆದಿಡುವುದು ಅವರ ಧ್ಯೇಯವಾಗಿರುತ್ತದೆ. ಪ್ರಸ್ತುತ ಕಥೆಗಾರರ ಸಹ ಅದೇ ಕ್ರಮವನ್ನು ಕಥೆಗಳ ನಿರೂಪಣೆ, ವಿವರಣೆಯಲ್ಲಿ ಅನುಸರಿಸಿದ್ದಾರೆ.

'ಸ್ಥಾವರ' ಕಥೆಯು ದೇವಸ್ಥಾನ ಕಟ್ಟಿಸುವಲ್ಲಿ ಮೇಲ್ಜಾತಿಯವರು ಕೆಳಜಾತಿಯವರನ್ನು ಬಲಿಪಶುಗಳಾಗಿಸುವ ವಿವರಗಳನ್ನು ನೀಡುತ್ತದೆ. ಅದಕ್ಕೆ ಕಾಂತಪ್ಪ ಮಾಸ್ತರ ಮತ್ತು ಬೆನಕಪ್ಪ ತಳವಾರನ ಮಗ ಪ್ರತಿರೋಧಿಸಿ ಬಲಿಯಾಗುತ್ತಾರೆ. ಅವರ ಬಲಿಯು ಗೌಡರಿಂದ ಆಗಿದ್ದರೂ, ಅದನ್ನು ಜನರು ದೇವರ ಶಾಪ ಎಂದು ಕಥೆ ಕಟ್ಟುತ್ತಾರೆ. 'ಶ್ವಾನ ಪರಿಣಯ ಪ್ರಸಂಗ'ದಲ್ಲಿ ಶಾಂಭವಿ(ಬ್ರಾಹ್ಮಣ ಹುಡುಗಿ), ವಿಲಿಯಂ(ಅಮೇರಿಕಾ ಕ್ರಿಶ್ಚಿಯನ್). ತಾವು ಸಾಕಿದ ಹೆಣ್ಣು ನಾಯಿ ಲಕ್ಷ್ಮೀಮಶಿವನ್ ಗೆ ತಮ್ಮದೇ ಜಾತಿಯ ಗಂಡು ನಾಯಿಯೊಡನೆ ಮದುವೆ ಮಾಡಲು ಯತ್ನಿಸುವರು. ಸಿಗದಿದ್ದಾಗ ಕೊನೆಗೆ ಮುನೇಗೌಡರ ವಿಕ್ಕಿಯೆಂಬ ಗಂಡು ನಾಯಿಯೊಡನೆ ಮದುವೆ ಮಾಡುವರು. ಮನುಷ್ಯರ ಜಾತಿ ಮನೋರೋಗ, ಅವರು ಸಾಕುಪ್ರಾಣಿಗಳೂ ಆರೋಪಿಸುವ ಅಮಾನುಷ ಜಾತಿ ಆಚರಣೆಯನ್ನು ಕಥೆಗಾರರು ವ್ಯಂಗ್ಯ

ಮತ್ತು ವಾಚ್ಯ ದಾಟಿಯಲ್ಲಿ ನಿರೂಪಿಸಿದ್ದಾರೆ. ವರ್ತಮಾನ ಭಾರತದ ಮೇಲ್ ಮತ್ತು ತಳ ಸಮುದಾಯಗಳ ಸಂಘರ್ಷಗಳ ಕೇಂದ್ರ ದೇವರು, ಧರ್ಮಮಯವಾಗಿರುವ ಆಯಾಮವನ್ನು ಕತೆಯು ಅನಾವರಣ ಮಾಡುತ್ತದೆ.

'ಭಾವವೆಂಬ ಮನಸ್ಸಿನೆಂಜಲು' ನಿರೂಪಣೆಯಲ್ಲಿ ಸುಭಾಷ ತನ್ನ ತಂದೆಯ ಹುಡುಕಾಟದಲ್ಲಿ ತಾಯಿಯ ಅನೈತಿಕತೆಯನ್ನು ಕಂಡುಕೊಳ್ಳುತ್ತಾನೆ. ಆದರೆ ವೇಶ್ಯಾವಾಟಿಕೆಗೆ ತಾಯಿಯನ್ನು ಗುರಿಮಾಡಿದ ವ್ಯವಸ್ಥೆಯ ಬಗೆಗೆ ತಕರಾರುಗಳಿಲ್ಲ. ಇರುವುದು ತಾಯಿಯ ಬಗೆಗಷ್ಟೇ. 'ನಾನಾರೆಂದರೆ ನಾನಲ್ಲ' ಕಥೆಯ ನಿರೂಪಕ ನಾಗೇಶನು ತನ್ನ ಮೂಲವನ್ನು ಹುಡುಕುತ್ತ ತಾಯಿಯ ಅಪವಿತ್ರ ಹುಟ್ಟು ತಾನೆಂದು, ಅವಳಿಂದ ದೂರವಾಗುತ್ತಾನೆ. 'ಪಂಚಾವರA ಎಂಬ ದಂಡಕಾರಣ್ಯದೊಳಗೆ ಮಕ್ಕಳ ಮಾರುಕಟ್ಟೆ' ಕಥೆಯು ಮಕ್ಕಳ ಮಾರಾಟದ ಚಿತ್ರಣವನ್ನು ದಾಖಲಿಸುತ್ತದೆ. ಈ ಮೂರು ಕಥೆಗಳಲ್ಲಿ ಹೆಣ್ಣು ಜೀವದ ಶೋಷಣೆಗೆ ಪುರುಷ ಅಧಿಕಾರಶಾಹಿ, ಅಹಂಕಾರ, ಆಕ್ರಮಣಗಳು ಕಾರಣವಾಗಿವೆ. ಬಸಿರು ಮಾಡಿದವರ ಬದಲಿಗೆ ಬಸಿರಾದ ತಾಂಡಾ ಹೆಣ್ಣುಮಕ್ಕಳು ಬಸಿರು ಬಚ್ಚಿಡುವಲ್ಲಿ- ವ್ಯವಸ್ಥೆಯ ಬಗೆಗೆ ವ್ಯಂಗ್ಯವನ್ನು ಸೂಚಿಸುತ್ತದೆ. ಲೈಂಗಿಕ ವ್ಯಾಪಾರಗಳಲ್ಲಿ ಸರಕುಗಳಾಗಿ ಕೆಳವರ್ಗದ ಹೆಣ್ಣುಮಕ್ಕಳು, ಸರಕು ಅನುಭೋಗಿಗಳಾಗಿ ಮೇಲ್ವರ್ಗದ ಗಂಡಸರು ಪಾಲ್ಗೊಳ್ಳುವಿಕೆಯು- ಒಟ್ಟು ಜಾತಿ ಮತ್ತು ಲಿಂಗ ವ್ಯವಸ್ಥೆಯ ಸಂಘರ್ಷಗಳನ್ನು ಕಥೆಗಾರರು ಗುರುತಿಸುತ್ತಾರೆ.

'ಎಲುಬಿನ ವ್ಯಾಪಾರ' ಕಥನವು ಗೇ (ಪುರುಷ-ಪುರುಷ) ಸಂಬAಧಗಳನ್ನು ವಿವರಿಸುತ್ತದೆ. ಏಡ್ಸಬಾಧಿತರಿಗೆ ಅರಿವು, ಉಪಚಾರ, ಔಷಧಿ, ಅವರ ಶವಸಂಸ್ಕಾರಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯು ಕೊಡುವ ಹಣವನ್ನು ಎನ್.ಜಿ.ಓ ಕಂಪನಿಗಳು ಲಾಭಕ್ಕಾಗಿ ಬಳಸುತ್ತವೆ. ಅವುಗಳ ಅಮಾನವೀಯತೆ, ಭ್ರಷ್ಟತೆ, ನಯವಂಚಕತನಗಳು- ಮನುಷ್ಯರನ್ನು ವ್ಯಾಪಾರ ಮಾಡುತ್ತವೆ. ವ್ಯಾಪಾರ ಜಗತ್ತಿನ ಕರಾಳ ಮುಖಗಳನ್ನು ಅಲ್ಲಿನ ವಿವರಗಳು ಸೂಚ್ಯವಾಗಿಸುತ್ತವೆ.

೨೧ನೇ ಶತಮಾನದಲ್ಲಿ ಬರೆಯುವ ಬರಹಗಾರರ ಸಮಕಾಲೀನ ದೊಡ್ಡ ಸಮಸ್ಯೆಯಾಗಿ ಕೋಮುವಾದವನ್ನು ವಿವರಿಸುತ್ತಾರೆ. ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಸಾಂಸ್ಕೃತಿಕ ಸಂಘರ್ಷದ ಫಲಶ್ರುತಿಯಾಗಿ ಕೋಮುವಾದ ಮೈದಾಳಿದೆ. ಹಾಗೆ ನೋಡಿದರೆ ಅದೊಂದು ಶುದ್ಧ ಅಧಿಕಾರಶಾಹಿ, ಪುರೋಹಿತಶಾಹಿ ಮತ್ತು ರಾಜಕಾರಣದ ವಿದ್ಯಮಾನವಾಗಿದೆ. ಮಹಾಂತೇಶ ನವಲಕಲ್ ಅವರ 'ಅರಮಗಿನ ಮನೆಯ ಹಣತೆ'ಯಲ್ಲಿ ಬಲರಾಮ ಧರ್ಮರಕ್ಷಣೆಗಾಗಿ 'ಛತ್ರಪತಿ ದೀಕ್ಷೆ' ತಗೆದುಕೊಂಡಿದ್ದಾನೆ. ಅದೊಂದು ಬಗೆಯಲ್ಲಿ ಇಸ್ಲಾಂನಲ್ಲಿರುವ ಜಿಹಾದ್ ಮಾದರಿ. ಬೆಳಗಾವಿಯಲ್ಲಿ ಬಲರಾಮನು ಆಶೀಫನ ಜೊತೆಗೆ ಸಹೋದರತ್ವದಿಂದ, ಅವರ ಮನೆಯ ಮಗನಂತಹ ಭಾವವನ್ನು ವ್ಯಕ್ತಪಡಿಸುತ್ತಾನೆ. ಆದರೆ ನಾಳೆಯ ದಿನ ನಗರದಲ್ಲಿ ಕೋಮುದಂಗೆಯನ್ನು ಉದ್ದಿಪಿಸುತ್ತೇವೆ. ಆಶೀಫ್ ಹೊರಗೆ ಬರಬೇಡ ಎಂದು ಹೇಳುತ್ತಾನೆ. ಈ ತೋರಿಕೆಯ ಮಿತಿಯುಳ್ಳ ವೈಯಕ್ತಿಕ ಸೌಹಾರ್ದತೆಯು, ಸಾಮಾಜಿಕವಾಗಿ ಅಸಹಿಷ್ಣತೆಯನ್ನು ಹಿಂಸೆಯನ್ನು ಪ್ರಚೋದಿಸುತ್ತದೆ. ಆಶೀಫ್ ರಕ್ಷಣೆಗೆ ಒಳಗಾದರೂ, ಅವನ ಸಮುದಾಯದವರು ಮುಸ್ಲಿಂ ಎನ್ನುವ ಕಾರಣಕ್ಕಾಗಿ ಜೀವವನ್ನು ಕಳೆದುಕೊಳ್ಳುತ್ತಾರೆ. ಅವರ ಶೂ, ಬಟ್ಟೆಯ ಅಂಗಡಿಗಳು ಬೆಂಕಿಗೆ ಆಹುತಿಯಾಗುತ್ತವೆ. ಕೋಮುವಾದದಲ್ಲಿ ತೊಡಗುವವರು, ಬಲಿಯಾಗುವವರು ಎರಡೂ ಧರ್ಮಗಳ ತಳಸಮುದಾಯ ಅಥವಾ ಕೆಳವರ್ಗದವರು ಎನ್ನುವುದು ಸಹ ಅಷ್ಟೇ ವಾಸ್ತವ.

೪).ಅನುಭಾವ- ಆಧ್ಯಾತ್ಮ ಪ್ರಗತಿಪರ ನಿಲುವು: ಬಿಸಿಲು ನಾಡಿನ ಕಥೆಗಾರರು ವಚನಕಾರ ಮತ್ತು ತತ್ವಪದಕಾರರ ಆಶಯಗಳಿಗೆ ತಮ್ಮ ಸಾಹಿತ್ಯದ ಮುಖೇನವಾಗಿ ಮುಖಾಮುಖಿಯಾಗುತ್ತಾರೆ. ಅಮರೇಶ ನುಗಡೋಣಿ, ಚಿದಾನಂದ ಸಾಲಿ, ಕಲಿಗಣನಾಥ ಗುಡದೂರು ಕಥೆಗಳಲ್ಲಿ ಒಂದಲ್ಲ ಒಂದು ಬಗೆಯಲ್ಲಿ ವಚನಕಾರರ ನಿಲುವು ಒಲವುಗಳನ್ನು

ವ್ಯಕ್ತಪಡಿಸುತ್ತಾರೆ. ಈ ಮಾತಿಗೆ ಮಹಾಂತೇಶ ನವಲಕಲ್ ಕಥೆಗಳು ಕೂಡ ಹೊರತಾಗಿಲ್ಲ. ಅನುಭವ ಮತ್ತು ಆಧ್ಯಾತ್ಮವನ್ನು ಸಾಮಾಜಿಕ ಚೌಕಟ್ಟಿನೊಳಗೆ ಇರಿಸಿ ನೋಡುವ ಕ್ರಮವನ್ನು ಶರಣರು ನಮಗೆ ಕಲಿಸಿದರು. ಜಾತಿ, ಕುಲ, ಲಿಂಗ, ಕಸಬುಗಳ ಭಿನ್ನತೆಯ ಕಾರಣದಿಂದ ಭಕ್ತಿಯ ಪರಿಧಿಯ ಹೊರಗಿರಿಸಲಾಗಿದ್ದ ಸಮುದಾಯಗಳು ೧೨ನೇ ಶತಮಾನದ ವಚನಕಾರರಾಗಿ ಮುಂಚೂಣಿಯಲ್ಲಿ ಗುರುತಿಸಿಕೊಂಡರು.

ನವಲಕಲ್ ಅವರ ಎರಡು ಕಥಾಸಂಕಲನದಲ್ಲಿ ಸ್ಥಾವರ, ಬೇರಿಲ್ಲದ ಬೇವಿನಮರದ ಮೇಲೆ ರೆಕ್ಕೆಯಿಲ್ಲದ ಹಕ್ಕಿ- ಕಥೆಗಳಲ್ಲಿ ವಚನಕಾರರ ಆಶಯ, ಧೋರಣೆಗಳನ್ನು ಪ್ರತಿನಿಧಿಸುತ್ತವೆ. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಬಸವಣ್ಣನವರ ವಚನದ ಸಾಲು ಬರುವ 'ಸ್ಥಾವರ' ಕಥೆಯಲ್ಲಿ ದೇವಾಲಯ ನಿರ್ಮಾಣ ಮಾಡುವ ಜನರು ಮತ್ತು ದೇವರ ಸ್ಥಾವರ ರೂಪವನ್ನು ನಿರಾಕರಿಸುವ ಜನರ ನಡುವಿನ ಸಂಘರ್ಷವನ್ನು ವಿಶ್ಲೇಷಿಸುತ್ತದೆ. ಪಟ್ಟಭದ್ರ ಹಿತಾಸಕ್ತಿಗಳು ದೇವರ ಆರಾಧನೆಯನ್ನು ಸ್ಥಾವರಗೊಳಿಸಿವೆ. ಅದನ್ನು ಕಾಂತಪ್ಪ ಮಾಸ್ತರನಂತವರು ಮೂರ್ತಿಭಂಜಕ ಮಾಡುವ ಮೂಲಕ ವಿರೋಧಿಸುತ್ತಾರೆ. ಈ ಸಮಾಜದಲ್ಲಿ ಜಂಗಮ ಮನಸ್ಥಿತಿಗಳ ಸಂಖ್ಯೆ ಕಡಿಮೆ. ಹಾಗಾಗಿ ಸ್ಥಾವರ ಮನಸ್ಥಿತಿಗಳನ್ನು ಮುಖಾಮುಖಿಯಾಗುವಲ್ಲಿ ಜೀವಹಾನಿಯಂತಹ ಶಿಲುಬೆಗಳನ್ನು ಎದುರಿಸಬೇಕಾಗುತ್ತದೆ. ವರ್ಣ ವ್ಯವಸ್ಥೆಯ ಮೇಲು ಜಾತಿಗಳು ಸ್ಥಾವರದ ಪರವಾಗಿದ್ದರೆ, ಕೆಳಜಾತಿಗಳು ಜಂಗಮದ ಪರವಾಗಿದ್ದಾವೆ. ಈ ಸಂಘರ್ಷ ಶೋಷಣೆಗಳಿಗೂ ಅವಕಾಶ ಮಾಡಿಕೊಡುವ ದುರಂತವನ್ನು ಕಥೆಯಲ್ಲಿ ಗಮನಿಸುತ್ತೇವೆ. 'ಬೇರಿಲ್ಲದ ಬೇವಿನಮರದ ಮೇಲೆ ರೆಕ್ಕೆಯಿಲ್ಲದ ಹಕ್ಕಿ'ಯಲ್ಲಿ ಮಹಾಂತ ಮಠದ ಸ್ವಾಮಿಗಳು, ಬಸು, ಮುದುಕ ಮತ್ತು ಮಾದಾರ ಮಲ್ಲಪ್ಪರ ಬದುಕಿನ ವಿವರಗಳುಳ್ಳ ನಿರೂಪಣೆಯಿದೆ. ಶರಣರ ಜಾತ್ಯಾತೀತ ತತ್ವಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ವಾಮಿಗಳ ಹಿಂದೇಟು ಹಾಕುವುದು ಮತ್ತು ಅಸ್ಪೃಶ್ಯತೆಯನ್ನು ಆಚರಿಸುವಲ್ಲಿ ತೊಡಗುತ್ತಾರೆ. ಶರಣರ ತತ್ವಗಳನ್ನು ಅಪ್ರಸ್ತುತಗೊಳಿಸುವ ವ್ಯವಸ್ಥೆಯನ್ನು ಆಧುನಿಕ ಸ್ವಾಮಿಗಳು ಹುಟ್ಟಿಹಾಕುತ್ತಿರುವುದನ್ನು ಕ್ರಮವನ್ನು ಕಥೆಗಾರರು ಪ್ರತಿರೋಧಿಸುತ್ತಾರೆ.

ಅವರ ಕಥೆಯ ಶೀರ್ಷಿಕೆಗಳ ವಚನಗಳ ಸಾಲುಗಳನ್ನು ನೆನಪಿಸುತ್ತವೆ. ನೀರಿನ ನೆರಳು, ಸ್ಥಾವರ, ಮಹಾಘನ ಕತ್ತಲು, ಬೀಜದ ಮರೆಯ ವೃಕ್ಷ, ಭಾವವೆಂಬ ಮನಸ್ಸಿನೆಂಜಲು, ಅರಗಿನ ಮನೆಯ ಹಣತೆ- ಈ ತಲೆಬರಹಗಳುಳ್ಳ ಕಥೆಗಳು ವಸ್ತು-ವಿಷಯ ಅನುಭಾವ, ಭಕ್ತಿ, ಕಾಯಕಕ್ಕೆ ಹೊರತಾದರೂ, ಅವುಗಳ ಪರೋಕ್ಷವಾಗಿ ಶರಣರ ಸಾಮಾಜಿಕ ಸಂವೇದನೆಯನ್ನು ನೆನಪಿಸುವಂತಿವೆ. ಅಮರೇಶ ನುಗಡೋಣಿ ಮತ್ತು ಮಹಾಂತೇಶ ನವಲಕಲ್ ಕಥೆಗಳನ್ನು 'ವಚನಗಳ ಆಶಯ' ದೃಷ್ಟಿಯಿಂದ ಪರಿಶೀಲಿಸಿದರೆ, ನುಗಡೋಣಿಯವರ ಕಥೆಗಳ ಪರಿಣಾಮದೃಷ್ಟಿಯು ನವಲಕಲ್ ಅವರ ನಿರೂಪಣೆಗಳಿಗಿಂತ ಹೆಚ್ಚು ಪಕ್ವವಾಗಿರುವುದನ್ನು ಕಾಣುತ್ತೇವೆ.

ಋ).ಸಮಾಜವಾದ-ವಿಜ್ಞಾನ-ವೈಚಾರಿಕ ದೃಷ್ಟಿ: ಸಾಮಾಜಿಕ ಮೌಢ್ಯ, ಅಂಧ ಆಚರಣೆಗಳು, ಮೂಢನಂಬಿಕೆಗಳು ಜೀವಘಾತುವಾದುದರಿಂದ ಬರಹಗಾರರು ಅಂತಹ ಆಚಾರ ವಿಚಾರಗಳನ್ನು ವಿರೋಧಿಸುತ್ತಾರೆ. ಆ ಮೂಲಕ ಮನುಷ್ಯರ ಘನತೆ ಗೌರವವನ್ನು ಎತ್ತಿಹಿಡಿಯುತ್ತಾರೆ. ಲೇಖಕರ ಪರೀಕ್ಷಕ ದೃಷ್ಟಿಯು ಸುಳ್ಳಿನ ಪೊರೆಯನ್ನು ಕಳಚಿ ಸತ್ಯವನ್ನು ಜನರ ಮುಂದೆ ತೆರೆದಿಡುವಂತೆ ಮಾಡುತ್ತದೆ. ಸಾಹಿತ್ಯ ನಿರೂಪಣೆಗಳ ಭಾಗವಾಗಿ ಸಮಾಜವಾದ, ವಿಚಾರವಾದ ಮತ್ತು ವೈಜ್ಞಾನಿಕ ದೃಷ್ಟಿಗಳ ಭಾಗವಾಗಿ ಬಂದಾಗ ಮಾತ್ರ- ಅಂತಹ ಬರಹಗಳು ಸಾಹಿತ್ಯಿಕ ಎನಿಸುತ್ತವೆ. ಅದರ ಹೊರತಾಗಿ ಅದೇ ಆಶಯಗಳು ವಾಚ್ಯಮಯವಾಗಿ ಬಂದರೆ ಸಾಹಿತ್ಯ ಶುಷ್ಕತೆಯನ್ನು ಅನುಭವಿಸುತ್ತವೆ. ಈ ಎರಡು ಕ್ರಮಗಳ ನಡುವೆ ಮಹಾಂತೇಶ ನವಲಕಲ್ ಕಥೆಗಳಲ್ಲಿ ಆ ಅಂಶಗಳು ವ್ಯಕ್ತವಾಗಿವೆ.

ಅವರ ಕಥೆಗಳ ಆಶಯ ಧೋರಣೆಗಳಲ್ಲಿ ವಿಚಾರವಾದಿ, ಸಮಾಜವಾದಿ ನಿಲುವುಗಳು ಮುಂಚೂಣಿಯಲ್ಲಿರುತ್ತವೆ. ಕೆಲವು ಕಡೆಗೆ ಕಥೆಗಳಿಗಿಂತ ಅವುಗಳ ತಾತ್ವಿಕತೆ ಮುನ್ನೆಲೆ ಬಂದಿರುವುದರಿಂದ- ಕಥನ ಗುಣಗಳಿಗೆ ಹಿನ್ನಡೆಯಾಗಿರುವುದನ್ನು ನೋಡುತ್ತೇವೆ. ನಮ್ಮಲ್ಲಿ ಶುದ್ಧ ಸಮಾಜವಾದ ನಿರೂಪಣೆಗಳನ್ನು ವೈಚಾರಿಕ ಸಾಹಿತ್ಯದ ಭಾಗವಾಗಿ ಅಭ್ಯಾಸಿಸುತ್ತೇವೆ. ಅದೇ ಆಶಯಗಳನ್ನು ಕುವೆಂಪು, ಅನಂತಮೂರ್ತಿಯವರು ಕಥನಗಳಲ್ಲಿ ತಂದರು.

'ಮಹಾಘನ ಕತ್ತಲು'ದಲ್ಲಿ ಆಲದ ಮರದ ಎಲೆಗಳ ಮೇಲೆ ನಾಗಚಿತ್ರ ಮೂಡಿರುವುದಕ್ಕೆ- ನಾಗರ ಪಂಚಮಿಯನ್ನು ಸರಿಯಾಗಿ ಆಚರಿಸಿಲ್ಲ, ಊರಿನವರು ನಾಗಪೂಜೆಯನ್ನು ಸರಿಯಾಗಿ ಮಾಡುತ್ತಿಲ್ಲ- ಎಂಬ ಕಟ್ಟುಕಥೆಗಳನ್ನು ಸಂಪ್ರದಾಯಸ್ಥರು ಜನರ ದೈವಿ ನಂಬಿಕೆ ಮೇಲೆ ಕಟ್ಟುತ್ತಾರೆ. ಆದರೆ ವಿಜ್ಞಾನ ಪದವಿದರನಾದ ನಿರೂಪಕನು 'ಆಲದ ಎಲೆ ಮೇಲೆ ನಾಗರ ಹಾವಿನ ಚಿತ್ರಗಳು' ಮೂಡುವುದಕ್ಕೆ ಸರ್ಪೈಂಟೆನ್ ಎಂಬ ಕೀಟವು ಸ್ರವಿಸುವ ಜೊಲ್ಲಿನಿಂದ ಅದು ರೂಪಗೊಂಡಿದ್ದೆಂಬ ವೈಜ್ಞಾನಿಕ ಸತ್ಯವನ್ನು ಜನರಿಗೆ ತಿಳಿಸುತ್ತಾನೆ.

'ದಂಡಿ'ಯಲ್ಲಿ ಅಯೋಡಿನ ಉಪ್ಪಿನ ಕಂಪನಿ ವಿರುದ್ಧ ಗಜಾನನ ಹೆಗಡೆ ಎಂಬ ಸಮಾಜವಾದಿ ಹೋರಾಟದ ಚಿತ್ರಣವಿದೆ. ಅವರ ಹಿಂಬಾಲಕರಾದ ಮಾಸ್ತಿಯಪ್ಪನಂತವರ ಸಾವು, ಸಮಾಜವಾದಿಗಳ ಪ್ರತಿಭಟನೆಯ ಯಶಸ್ಸು, ಫಲಿತಾಂಶವಾಗಿ ಸೋಲಾಗುವಿಕೆಯನ್ನು ಸಾಂಕೇತಿಸುತ್ತದೆ. 'ಧರಣಿಯೆಂಬ ಪರಿಣಾಮಮುಖಿ' ಕತೆಯು ಕಾಮ್ರೇಡ್ ಕುಮಾರ ಅಸಂಗತ ವರ್ತನೆಯನ್ನು ವಿವರಿಸುತ್ತದೆ. ದೇಸಾಯಿಯರ ಮಗ ಜಯತೀರ್ಥನು ಭೂದಾನ ಮೂಲಕ ಭೂಮಿ ಹಂಚುತ್ತಾನೆ. ಅದು ಕಾಮ್ರೇಡ್‌ರಿಗೆ ಇಷ್ಟವಾಗುವುದಿಲ್ಲ. ದೇಸಾಯಿಯನ್ನು ಕೊಲ್ಲುವ ಗುರಿಗೆ, ಅವನ ಮಗ ಸಮಾಜವಾದಿ ಆಶಯವುಳ್ಳ ಕೆಲಸವನ್ನು ಮಾಡಿದಾಗಲೂ ಬಲಿಯಾಗುತ್ತಾನೆ. ಪೋಲಿಸರು ಕಾಮ್ರೇಡ್ ಕುಮಾರ್‌ಗೆ ಶೂಟೌಟ ಮಾಡುವಾಗ ಮುಗ್ಧ ಬೆಟ್ಟದ ಬಸವರಾಜ ಕೂಡ ಸಾವಾಗುತ್ತಾನೆ. ಕಥೆಯು ಮಾರ್ಕ್ಸ್ವಾದ, ಮಾವೋವಾದ, ಸಮಾಜವಾದ- ಅನುಷ್ಠಾನಕ್ಕೆ ಯತ್ನಿಸುವ ಕಾ.ಕುಮಾರನಂತವರು ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳದೇ, ಹಿಂಸೆಗೆ ಇಳಿಯುತ್ತಾರೆ. ತಮ್ಮ ಜೊತೆಗೆ ಸುತ್ತಲ್ಲಿನ ಅಮಾಯಕ ಜೀವಿಗಳನ್ನು ಬಲಿಪಶುಗಳನ್ನಾಗಿಸುತ್ತಾರೆ. ಹೋರಾಟ, ತತ್ವ-ಸಿದ್ಧಾಂತಗಳ ಕಾರ್ಯಾನುಷ್ಠಾನದಲ್ಲಿ ಎದುರಾಗುವ ಸಂಘರ್ಷದ ಎಳೆಗಳನ್ನು ಕಥೆಗಾರರು ನಿರೂಪಿಸುತ್ತಾರೆ. 'ಗಾಂಧಿ... ಬಂದಾಮ'ದಲ್ಲಿ ಗಾಂಧಿ ಹೆಸರಿಟ್ಟುಕೊಂಡ ವ್ಯಕ್ತಿಯನ್ನು ಅವನ ಆಫೀಸಿನವರು ಆ ಹೆಸರಿನ ಕಾರಣದಿಂದ ಅಸಹಿಷ್ಟು ಮತ್ತು ಮನೋಅಸ್ಪೃಶ್ಯ ವರ್ತನೆಯನ್ನು ಪ್ರದರ್ಶಿಸುವ ಅಸಂಗತವಿದೆ. ಕಲಿಗಣನಾಥ ಗುಡದೂರರ 'ಗಾಂಧಿಕಟ್ಟೆ' ಕೂಡ ಹೆಸರಿನ ಬಗೆಗಿನ ಅನ್ಯಭಾವನೆಯನ್ನು ವಿವರಿಸುತ್ತದೆ. ಈ ಎರಡೂ ಕಥೆಗಳಲ್ಲಿ ೧೪೦ ಕೋಟಿ ಜನರ ರಾಷ್ಟ್ರಪಿತ ಮಹಾತ್ಮ ಗಾಂಧಿ ಅನಾಥ ತಂದೆಯಂತೆ ಕಾಣುತ್ತಾರೆ.

ಮೇಲಿನ ವಸ್ತು ವಿಷಯಗಳನ್ನು ನಿರ್ವಹಿಸುವಾಗ ಮಹಾಂತೇಶ ನವಲಕಲ್ ತಾಳುವ ನಿಲುವುಗಳಲ್ಲಿ ಹೊಸತನವಿದೆ. ಜೊತೆಗೆ ಜೀವಪರ ಮತ್ತು ಮಾನವಿಯ ನೆಲೆಗಳ ಕಡೆಗೆ ಅವರ ಕಥೆಗಳು ಆಶಯವಿದೆ. ಪ್ರಾದೇಶಿಕತೆಯ ಸಂಗತಿಗಳಂತೆ ಜಾಗತಿಕ ಸವಾಲುಗಳನ್ನು ಅಷ್ಟೇ ಸಮರ್ಪಕವಾಗಿ ಕಥೆಯ ಭಿತ್ತಿಯೊಳಗೆ ತಂದಿದ್ದಾರೆ. ವಚನಕಾರರ ಆಶಯ, ಕೃಷಿ ಪದವಿದರರ ತಿಳುವಳಿಕೆ, ಚರಿತ್ರೆಯ ವರ್ತಮಾನ- ಈ ಸಂವೇದನೆಗಳು ಅವರ ಕಥಾವಸ್ತುವನ್ನು ನಿರ್ವಹಿಸುವ, ವಿಸ್ತರಿಸುವ ಮತ್ತು ಮುನ್ನಡಿಸುವ ಸಂಚಯ ಶಕ್ತಿಗಳಾಗಿವೆ. ಬಿಸಿಲು ನಾಡಿನ ಪ್ರಾದೇಶಿಕ ಭಾಷೆ, ನುಡಿಗಟ್ಟುಗಳ ತೀವ್ರತೆಯು ನವಲಕಲ್ ಕಥೆಗಳಲ್ಲಿ ಗಮನಾರ್ಹ ಸಂಗತಿಯಾಗಿ ಕಾಣಿಸಲಾರದು. ಅವರ ಕಥೆಗಳು ಮುಖ್ಯವಾಗುವುದು ವಸ್ತು-ವಿಷಯ, ಅವು ಪ್ರತಿನಿಧಿಸುವ ಆಶಯಗಳ ಕಾರಣದಿಂದ ಗಮನಾರ್ಹ ಅನಿಸುತ್ತವೆ. ಅವರ ಕಥೆಗಳು ಥೈಲಾಂಡ್, ಮಾಲ್ದಿವ್ಸ್, ಮುಂಬೈ, ಕಲ್ಕತ್ತಾ, ಬೆಂಗಳೂರು, ಬೆಳವಾವಿ- ಮುಂತಾದ

ದೂರದ ಊರುಗಳಲ್ಲಿ ಹುಟ್ಟಿಕೊಳ್ಳುತ್ತಿದ್ದರು. ಅವು ನಮ್ಮದೇ ಊರಿನ ಕೇರಿನ ಕಥೆಗಳ ಅನಿಸಿಬಿಡುತ್ತವೆ. ಮಹಾಂತೇಶ ನವಲಕಲ್ ಕಥೆಗಳಲ್ಲಿ ಕೇಂದ್ರವಿರುವುದಿಲ್ಲ. ಆದರೆ ಆ ಕೇಂದ್ರವು ಸಮಾಜವನ್ನು, ವರ್ತಮಾನವನ್ನು ಒಳಗೊಂಡಿದೆ. ಒಂದೇ ಓದಿಗೆ, ಸಾಮಾನ್ಯ ಓದುಗರಿಗೆ ಅರ್ಥವನ್ನು ಸುಲಭವಾಗಿ ಬಿಟ್ಟುಕೊಡದ, ಈ ಕಥೆಗಳು 'ಪ್ರಬುದ್ಧರಿಗೆ ಮಾತ್ರ' ಎನ್ನುವಂತೆ ಅನಿಸಿದರೆ ಸೋಜಿಗವೆನಿಲ್ಲ.